8	Chitradurga Holalkere Hosadurga Chickmagalur Mudigere Belthangadi Bantwal Mangalore (to join NH-17)	283
9	Dharwar Londa Anmod Panaji (to join NH-17).	95
10	Padubidri Karkala Sringeri Thirthahalli Shikaripur Shiralkoppa Hubli Bagalkot Hungund.	550
11	Sira (on NH-4 Bangalore Poona Road) Madhugiri Gowribidanur Chickballapur Chintamani Srinivasapur Mulbagal (on NH-4 Bangalore Madras Road).	160
	Total Kms:	3,825

ಸೊರಬ ತಾಲ್ಲೂಕಿನ ದಂಡಾವತಿ ಯೋಜನೆ

೧೧೦ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೊರಬ ತಾಲ್ಲೂಕಿನ ದಂಡಾವತಿ ನೀರಾವರಿ ಯೋಜನೆಯನ್ನು ಕೈಗೊಳ್ಳಲಾಗುವುದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೭,೫೦೦ ಎಕರೆಗಳಿಗೆ ನೀರಾವರಿ ಒದಗಿಸುವ ೧೯೮೮-೮೯ರ ದರಗಳ ಮಟ್ಟದಲ್ಲಿ, ೨೧೬೨ ಲಕ್ಷ ರೂ.ಗಳ ಅಂದಾಜು ವೆಚ್ಚದ, ದಂಡಾವತಿ ಯೋಜನಾ ವರದಿಯನ್ನು ಮುಖ್ಯ ಎಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಅವರು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಕೃಷ್ಣಾ ಜಲಾನಯನ ಪ್ರದೇಶದ ತಾಂತ್ರಿಕ ಸಮಿತಿಯಿಂದ ಈ ಯೋಜನಾ ವರದಿಗೆ ಒಪ್ಪಿಗೆ ಪಡೆದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ನೀರಾವರಿ ಯೋಜನೆ

೧೧೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ನೀರಾವರಿ ಯೋಜನೆ ಯಾವ ಹಂತದಲ್ಲಿದೆ. ಈ ವರ್ಷದಲ್ಲಿಯಾದರೂ ಈ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದೇ?

ಆ) ಈ ಯೋಜನೆಯನ್ನು ೧೯೯೦-೯೧ನೇ ಸಾಲಿನಲ್ಲಿಯಾದರೂ ಕೈಗೊಳ್ಳಲಾಗುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಮತ್ತು ಆ) ಈ ಯೋಜನೆಗೆ ೧೩೧೦ ಹೆಕ್ಟೇರ್ ಅರಣ್ಯ ಭೂಮಿ ಬಿಡುಗಡೆಯಾಗಬೇಕಾಗಿದ್ದು ಇದರಲ್ಲಿ ೩೪೬ ಬೆಲೆ ಬಾಳುವ ಮರಗಳಿದ್ದು, ಇವುಗಳ ಅಂದಾಜು ಮೌಲ್ಯ ಸುಮಾರು ೧೧.೦೬ ಕೋಟಿ ರೂ. ಆಗುವುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಬೇಕಾಗುವ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದು ನಿರ್ಧರಿಸಿರುವುದರಿಂದ, ಈ ಕಾಮಗಾರಿಯನ್ನು ಕೈಗೊಳ್ಳಲಂ ಸಾಧ್ಯವಿಲ್ಲ.

ಹರಿಹರದಿಂದ ಕೊಟ್ಟೂರು ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವ ಬಗ್ಗೆ

೧೧೫. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಹರ–ಕೊಟ್ಟೂರು ರೈಲ್ವೆ ಮಾರ್ಗದ ಬೇಡಿಕೆ ಬಹಳ ವರ್ಷಗಳಿಂದ ಇರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರದವರೊಂದಿಗೆ ಸಮಾಲೋಚಿಸಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಸರ್ವೆ ವರದಿಯನ್ನು ಇತ್ತೀಚೆಗೆ ಸಲ್ಲಿಕೆಯಾಗಿದ್ದು, ಸದರಿ ಪ್ರಾಜೆಕ್ಟ್ ಪ್ರತಿಫಲದಾಯಕವಲ್ಲವಾದುದರಿಂದ ಈ ಪ್ರಾಜೆಕ್ಟನ್ನು ಕೈಗೆತ್ತಿಕೊಳ್ಳುವುದನ್ನು ಪರಿಗಣಿಸುವುದು ಕಷ್ಟಕರವೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ. ಈ ಪ್ರಾಜೆಕ್ಟನ್ನು ಸಾಮಾಜಿಕ–ಆರ್ಥಿಕ ದೃಷ್ಟಿಯಲ್ಲಿ ಪರಿಗಣಿಸಬೇಕಾಗುವುದೆಂದೂ, ಹಾಗೂ ಪ್ರತಿಫಲದ ದೃಷ್ಟಿಯಲ್ಲಿ ಪರಿಗಣಿಸಬಾರದೆಂದೂ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಕೋರಿಕೆ ಸಲ್ಲಿಸಿದೆ.

ಹೇಮಾವತಿ ಜಲಾಶಯದ ಕಾಲುವೆಗಳಿಂದ ನೀರಾವರಿ ಆಗುತ್ತಿರುವ ಭೂಮಿ

೧೪೫.(ಬಿ) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಜಲಾಶಯದಿಂದ ಹಾಸನ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನು ಮುಳುಗಡೆಯಾಯಿತು?

ಆ) ಹಾಸನ ತಾಲ್ಲೂಕಿನಲ್ಲಿ ಈ ಜಲಾಶಯದಿಂದ ಎಷ್ಟೆಷ್ಟು ಎಕರೆಗಳಲ್ಲಿ ವೆಟ್‌ಕ್ರಾಪ್ಸ್ ಮತ್ತು ಭತ್ತ, ಕಬ್ಬು ಮುಂತಾದ ನೀರಾವರಿ ಬೆಳೆಗಳನ್ನು ರಾಗಿ, ಜೋಳ, ನೆಲಗಡಲೆ ಮುಂತಾದ ಅರೆ ನೀರಾವರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೩೫೭೦ ಎಕರೆಗಳು.

ಆ) ಹೇಮಾವತಿ ಎಡದಂಡೆ ನಾಲೆಯ ಪೂರ್ಣ ಅಚ್ಚುಕಟ್ಟು ಪ್ರದೇಶದಲ್ಲಿ ಅರೆ ಖುಷ್ಕಿ ಬೆಳೆ ಯೋಜಿಸಲಾಗಿದೆ. ಹಾಸನ ತಾಲ್ಲೂಕಿನಲ್ಲಿ ೮೦೯ ಹೆಕ್ಟೇರು (೨೦೦೦ ಎಕರೆಗಳು) ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.